## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸ್ವಚ್ಛ ಗ್ರಾಮ ಯೋಜನೆಯ ಅನುಷ್ಠಾನಕ್ಕಾಗಿ ಹುಡ್ಕೋ ಸಂಸ್ಥೆಯಿಂದ ತೆಗೆದುಕೊಂಡ ಭಾಗಶಃ ಸಾಲ ಮರುಪಾವತಿ ಮತ್ತು ಸಾಲದ ಮೇಲಿನ ಬಡ್ಡಿಯನ್ನು ಪಾವತಿಸುವುದಕ್ಕಾಗಿ KRIDL / KLAC ನಿಗಮಕ್ಕೆ ಅನುದಾನ ಬಿಡುಗಡೆ ಕುರಿತು.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 65 ಗ್ರಾನೀಸ(1)11, ದಿನಾಂಕ:01.07.2013.
2. ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:ಆಇ/253/ವೆಚ್ಚ-6/2011, ದಿನಾಂಕ:25.09.2013.

-----

**ಪೀಠಿಕೆ:**

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು ಇವರ ಮುಖೇನ ರಾಜ್ಯ ಸರ್ಕಾರದ ಮೊದಲನೇ ಹಂತದ ಸ್ವಚ್ಛಗ್ರಾಮ ಯೋಜನೆಯ ಅನುಷ್ಠಾನಕ್ಕಾಗಿ ಹುಡ್ಕೋ ಸಂಸ್ಥೆಯಿಂದ **ರೂ.160.00ಕೋಟಿ** ಸಾಲ ಪಡೆಯಲಾಗಿದೆ. **ಸೆಪ್ಟಂಬರ್ 2013**ರ ಅಂತ್ಯಕ್ಕೆ ಎರಡನೆಯ ಕಂತಿನ ಭಾಗಶಃ ಅಸಲು ಮತ್ತು ಬಡ್ಡಿ ಬಾಬ್ತು ಮರುಪಾವತಿಗಾಗಿ **ರೂ.3,94,28,978.00** ಅನುದಾನವನ್ನು ಬಿಡುಗಡೆ ಮಾಡಬೇಕಾಗಿದೆ. 2013-14ರ ಆರ್ಥಿಕ ಸಾಲಿಗೆ ಸದರಿ ಬಾಬ್ತು **ರೂ.16.00ಕೋಟಿ** ಅನುದಾನ ಒದಗಿಸಲಾಗಿದ್ದು, **ಸೆಪ್ಟಂಬರ್ 2013**ರ ಅಂತ್ಯದವರೆಗಿನ ಎರಡನೆಯ ಕಂತಿಗೆ ಸಂಬಂಧಿಸಿದಂತೆ **ರೂ.3,94,28,978.00** ಅನುದಾನವನ್ನು **KRIDL / KLAC**ಗೆ ಬಿಡುಗಡೆ ಮಾಡಲು **ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:ಆಇ/253/ವೆಚ್ಚ-6/2011, ದಿನಾಂಕ:25.09.2013**ರಲ್ಲಿ ಸಹಮತಿಸಿದೆ. ಅಂತೆಯೇ, ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 65 ಗ್ರಾನೀಸ(1) 2011, ಬೆಂಗಳೂರು, ದಿನಾಂಕ:26.09.2013**

ಪೀಠಿಕೆಯಲ್ಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ, ಮೊದಲನೇ ಹಂತದ ಸ್ವಚ್ಛ ಗ್ರಾಮ ಯೋಜನೆಯ ಅನುಷ್ಠಾನಕ್ಕಾಗಿ ಹುಡ್ಕೋ ಸಂಸ್ಥೆಯಿಂದ ತೆಗೆದುಕೊಂಡಿರುವ ಸಾಲದ ಬಾಬ್ತು **2013-14**ರ ಸಾಲಿನಲ್ಲಿ **ಸೆಪ್ಟಂಬರ್ 2013**ರ ಅಂತ್ಯದವರೆಗಿನ ಎರಡನೆಯ ಕಂತಿನ ಭಾಗಶಃ ಅಸಲು ಮತ್ತು ಬಡ್ಡಿ ಬಾಬ್ತು ಮರುಪಾವತಿಸುವುದಕ್ಕಾಗಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಬೆಂಗಳೂರು ಇವರಿಗೆ **ರೂ.3,94,28,978.00** (**ಮೂರು ಕೋಟಿ ತೊಂಭತ್ತನಾಲ್ಕು ಲಕ್ಷ ಇಪ್ಪತ್ತೆಂಟು ಸಾವಿರದ ಒಂಭತ್ತು ನೂರ ಎಪ್ಪತ್ತೆಂಟು ರೂಪಾಯಿಗಳು ಮಾತ್ರ**) ಅನುದಾನ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ಈ ಅನುದಾನವನ್ನು **2215-02-105-0-01-240** (ಯೋಜನೇತರ) **2012-13**ರಡಿ ಲಭ್ಯವಿರುವ ಅನುದಾನದಿಂದ ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನವನ್ನು, **KRIDL / KLAC PAYEES RECEIPT** ಮೇಲೆ ಖಜಾನೆಯಿಂದ ಪಡೆದುಕೊಳ್ಳಲು ಕ್ರಮ ವಹಿಸತಕ್ಕದ್ದು.

3. ಸದರಿ **GI Bill**ಗೆ ನಿರ್ದೇಶಕರು **(SWSM)** ಹಾಗೂ ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರು ಮೇಲುರುಜು ಮಾಡುವ ಮುಖೇನ ಹಣ ಡ್ರಾ ಮಾಡಬಹುದಾಗಿದೆ.

4. ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: **ಆಇ/253/ವೆಚ್ಚ-6/2011, ದಿನಾಂಕ:25.09.2013**ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.

3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಉಪ ಮುಖ್ಯಮಂತ್ರಿಗಳು ರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬೆಂಗಳೂರು.
9. ವಿಶೇಷಾಧಿಕಾರಿ(ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು-1.
10. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
11. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಸಂಕೀರ್ಣ, ಅಭಯ ಸಂಕೀರ್ಣ, 4ನೇ ಮಹಡಿ, ನಂ.55, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20.
12. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ರಾಜಭವನ ರಸ್ತೆ, ಬೆಂಗಳೂರು.
13. ಪ್ರಾದೇಶಿಕ ಮುಖ್ಯಸ್ಥರು, ಹುಡ್ಕೋ, ಬೆಂಗಳೂರು ಪ್ರಾದೇಶಿಕ ಕಛೇರಿ, ಮಣಿಪಾಲಸೆಂಟರ್, ಎನ್-703/704/47, ಡಿಕೆನ್ಸ್‌ನ್ ರಸ್ತೆ, ಬೆಂಗಳೂರು-42.
14. ಮುಖ್ಯಲೆಕ್ಕಾಧಿಕಾರಿಗಳು, ಮುಖ್ಯ ಇಂಜಿನಿಯರ್‌ರ ಕಛೇರಿ, ಶೇಷಾದ್ರಿಪುರಂ, ಬೆಂಗಳೂರು-20.
15. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ ಇಲಾಖೆ, ಬೆಂಗಳೂರು.
16. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ನಂ.49, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
17. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್ ಸಾಬ್ ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
18. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್) ಇವರುಗಳ ಆಪ್ತ ಕಾರ್ಯದರ್ಶಿಗಳು/ನಿರ್ದೇಶಕರು, KRWSSA & ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ/ ನಿರ್ದೇಶಕರು (ಗ್ರಾಮೂಸೌ)/ ಆಂತರಿಕ ಆರ್ಥಿಕ ಸಲಹೆಗಾರರು/ ಮುಖ್ಯಸ್ಥರು (ಗ್ರಾಮಸ್ವರಾಜ್)ಇವರುಗಳ ಆಪ್ತಸಹಾಯಕರು.
19. ಮುಖ್ಯಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂರಾ ಇಲಾಖೆ, ಬೆಂಗಳೂರು.
20. ಶಾಖಾಧಿಕಾರಿ, ರವಾನೆ & ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ, (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
21. ಗ್ರಾ.ಅ.ಪಂ.ರಾಜ್ ಇಲಾಖೆ ಮಾಹಿತಿಕೇಂದ್ರ-10 ಪ್ರತಿಗಳು.
22. ಶಾಖಾರಕ್ಷಾಕಡತ / ಹೆಚ್ಚುವರಿ ಪ್ರತಿಗಳು.